# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ

ಪಿ. ಸಿ.ಆರ್. ನಂ.17/2023

ಸಿಡಬ್ಲ್ಯೂ-3

| | |
|---|---|
| ಹೆಸರುಃ | ಕೀರ್ತಿ |
| ತಂದೆಯ ಹೆಸರುಃ | ದೇವೆಂದ್ರಪ್ಪ ನಾಯಿಕೊಡಿ |
| ವಯಸ್ಸುಃ | 17 ವರ್ಷ |
| ಉದ್ಯೋಗಃ | ವಿದ್ಯಾರ್ಥಿನಿ |
| ವಾಸ ಸ್ಥಳಃ | ಸೇಡಂ |

ದಿನಾಂಕ 26-08-2023

ಪ್ರಮಾಣ ವಚನ ಬೋಧಿಸಲಾಯಿತು.

## ಸಾಕ್ಷಿಯ ಪ್ರಮಾಣಿಕೃತ ಹೇಳಿಕೆ

**ವಿಚಾರಣೆಃ ನ್ಯಾಯಾಲಯದಿಂದ**

ನಾನು ನನ್ನ ತಂದೆ ದೇವಿಂದ್ರಪ್ಪ, ತಾಯಿ ಪೂರ್ಣಿಮಾ ಸೇಡಂ ಪಟ್ಟಣದ ವಾಲ್ಮಿಕಿ ನಗರದ ನಮ್ಮ ಸ್ವಂತ ಮನೆಯಲ್ಲಿ ವಾಸ ಹೊಂದಿರುತ್ತೇವೆ.

ದಿನಾಂಕ 17.04.2023 ರಂದು ಸುಮಾರು 1.30 ರಿಂದ 02.00 ಗಂಟೆಯ ಮಧ್ಯೆ ಚಂದ್ರಕಾಂತ ತಂದೆ ಸಾಯಿಬಣ್ಣ ನಾಯಿಕೋಡಿ, ಭಾಗ್ಯಲಕ್ಷ್ಮೀ ಗಂಡ ಚಂದ್ರಕಾಂತ, ಗಣೇಶ ತಂದೆ ಚಂದ್ರಕಾಂತ, ದಿನೇಶ ತಂದೆ ಚಂದ್ರಕಾಂತ, ಸಾವಿತ್ರಮ್ಮ ಗಂಡ ಸಾಯಿಬಣ್ಣ ಇವರು ನಮ್ಮ ಮನೆಗೆ ಬಂದು ನನ್ನ ತಂದೆಗೆ ನಾಳೆ 18 ನೇ ತಾರೀಖಿನಂದು ಪ್ರಕರಣದ ತೀರ್ಪು ಇರುತ್ತದೆ ನಿನ್ನ ಪರವಾಗಿ ಆದೇಶ ಆದ್ದಲ್ಲಿ ನಿಮ್ಮನ್ನು ಖಲ್ಲಾಸ ಮಾಡುತ್ತೇವೆ ಅಂತಾ ಅಂದಿರುತ್ತಾರೆ. ಅದೇ ರೀತಿ ಪ್ರಕರಣ ನಮ್ಮ ತಂದೆಯ ಪರವಾಗಿ ಆದಲ್ಲಿ ಜೀವಂತ ಉಳಿಸುವುದಿಲ್ಲ ಅಂತಾ ಅಂದಿರುತ್ತಾರೆ. ನಾನು ಆಗ ನಮ್ಮ ಮನೆಯಲ್ಲಿ ಇದ್ದೆ.

ಆಗ ನನ್ನ ತಂದೆ ಗುಲಬರ್ಗಾಕ್ಕೆ ಹೋಗಿ ಎಸ್.ಪಿ. ಅವರಲ್ಲಿ ದೂರು ಸಲ್ಲಿಸಿರುತ್ತಾರೆ. ಅದಾದ ನಂತರ ನಮ್ಮ ತಂದೆಗೆ ಮೇಲಿಂದ ಮೇಲೆ ಅವರು ಜೀವ ದಮಕಿ ಹಾಕುತ್ತಾ ಬಂದಿದ್ದು ದಿನಾಂಕ 24.05.2023 ರಂದು ಸಾಯಂಕಾಲ 04.00 ರಿಂದ 04.30 ಗಂಟೆಗೆ 5 ಜನರು ಕೂಡಿಕೊಂಡು ಬಂದು ನನ್ನ ತಂದೆಗೆ ಕಟ್ಟಿಗೆಯಿಂದ ಹೊಡೆದಿರುತ್ತಾರೆ. ಅವರು ನನ್ನ ತಾಯಿ ಬಿಡಿಸಲು ಹೋದಾಗ ಸಹ ಅವರಿಗೂ ಹೊಡೆದಿರುತ್ತಾರೆ. ನಂತರ ನನ್ನ ತಂದೆ ಸೇಡಂ ಪಿ.ಎಸ್.ಐ. ಮತ್ತು ಸಿ.ಪಿ.ಐ. ರವರಿಗೆ ದೂರು ಕೊಟ್ಟಿರುತ್ತೇವೆ. ಅದೇ ರೀತಿ ಎಸ್.ಪಿ. ಅವರಿಗೂ ಸಹ ದೂರು ಕೊಟ್ಟಿರುತ್ತೇನೆ. ನಂತರ

ದಿನಾಂಕ 26.05.2023 ರಂದು ಮುಂಜಾನೆ 09.30 ಗಂಟೆಗೆ ಮೇಲೆ ಹೇಳಿದವರು ನಮ್ಮ ತಂದೆಗೆ ಮೂರು ಬಿಡ್ಲಿಂಗ ಮತ್ತು ಆಸ್ತಿಯನ್ನು ನಮ್ಮ ಹೆಸರಿಗೆ ಬರೆದುಕೊಡಬೇಕು ಎಂದು ಅಂದು ಹೊಡೆದಿರುತ್ತಾರೆ. ನನ್ನ ತಾಯಿಗೂ ಸಹ ಹೊಡೆದಿರುತ್ತಾರೆ. ನನ್ನ ತಾತ ಸದರಿ ಮೇಲೆ ಹೇಳಿದವರ ಉಪಟಳ ತಾಳಲಾರದೆ ಡೆತ್‌ನೋಟ್ ಸಹ ಬರೆದಿರುತ್ತಾರೆ. ನಮ್ಮ ತಂದೆ ನೀಡಿದ ದೂರಿಗೆ ಪೊಲೀಸರು ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲ ದಿನಾಂಕ 18.04.2023 ರಂದು ಹಿರಿಯ ನ್ಯಾಯಾಲಯದಲ್ಲಿ ಪ್ರಕರಣ ನಮ್ಮ ಪರವಾಗಿ ತೀರ್ಪು ಆಗಿರುತ್ತದೆ. ನಮ್ಮ ತಾತನನ್ನು ಮೇಲೆ ಹೇಳಿದವರು ಮಾನಸಿಕವಾಗಿ ಹಿಂಸೆ ನೀಡಿ ಕೊಂದಿರುತ್ತಾರೆ. ಮೇಲೆ ಹೇಳಿದ ತಂಟೆ ನಮ್ಮ ತಂದೆಯ ಪರವಾಗಿ ತೀರ್ಪು ನಿಖಾಲೆಯಾಗಿದ್ದರಿಂದ ಆಸ್ತಿಯ ಸಂಬಂಧ ಆಗಿರುತ್ತದೆ. ಆರೋಪಿತರು ಆಸ್ತಿ ಪಡೆಯುವುದರ ಸಲುವಾಗಿ ನಮಗೆ ದಮಕಿ ಹಾಕುತ್ತಾ ಬಂದಿರುತ್ತಾರೆ.

ಆದ್ದರಿಂದ ಎದುರುದಾರರ ವಿರುದ್ಧ ಕಾನೂನು ರೀತಿ ಕ್ರಮ ಜರುಗಿಸಬೇಕು.

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರ. ದ. ನ್ಯಾ. ದಂ. ಸೇಡಂ.

*SYH